**<u>ಸಾಕ್ಷಿಯನ್ನು ದಿನಾಂಕಃ-22.11.2023 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-</u>**

ದಿನಾಂಕ 03.03.2018 ರಂದು ಚಾಸಾ-1 ರವರು ಆರೋಪಿತರ ವಿರುದ್ಧ ಪ್ರಕರಣವನ್ನು ದಾಖಲಿಸಿದ್ದರು. ಇಷ್ಟನ್ನು ಬಿಟ್ಟು ನನಗೆ ಏನೂ ಗೊತ್ತಿಲ್ಲ.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)**

**<u>ಪಾಟೀ ಸವಾಲುಃ- ಸ.ಸ.ಅ. ರವರಿಂದಃ-</u>**

ದಿನಾಂಕ 26.12.2017 ರಂದು ನನ್ನ ಬ್ಯಾಂಕ್ ಖಾತೆಗೆ ರೂ.20,000-00 ಗಳು ಮತ್ತು ದಿನಾಂಕ 12.01.2018 ರಂದು ರೂ.25,000-00ಗಳು ಜಮೆ ಆಗಿದ್ದರ ಬಗ್ಗೆ ಮೊಬೈಲಗೆ ಮಾಹಿತಿ ಬಂದಿತ್ತು ಎಂದರೆ ಸರಿ. ದಿನಾಂಕ 13.01.2018 ರಂದು ಆರೋಪಿ ಪೋನ್ ಮಾಡಿ ತನ್ನ ತಾಯಿಗೆ ಆಸ್ಪತ್ರೆಗೆ ಸೇರಿಸಬೇಕು ತನ್ನ ಸಂಬಂಧಿಕರು ತಪ್ಪಾಗಿ ನಿಮ್ಮ ಖಾತೆಗೆ ಹಣ ಜಮಾ ಮಾಡಿದ್ದು, ಸದರಿ ಹಣವನ್ನು ಮರಳಿ ಕೊಡಿ ಎಂದು ಕೇಳಿದ್ದು, ನಾನು ಅವರ ಮಾತನ್ನು ನಂಬಿ, ಈ ಮೊದಲು ನಾನು ಬ್ಯಾಂಕಿನಿಂದ ಹಣ ತೆಗೆದುಕೊಂಡಿದ್ದು, ಅದನ್ನು ಸೇರಿಸಿ ಒಟ್ಟು ರೂ.45,000-00 ಹಣವನ್ನು ತೆಗೆದು ಕೊಟಿಟದ್ದೇನೆ ಎಂದರೆ ಸರಿ. ಇದೇ ರೀತಿ ಬೇರೆ ಶಿಕ್ಷಕರ ಖಾತೆಗೆ ಹಣ ಜಮಾ ಮಾಡಿ ಆರೋಪಿ ಮರಳಿ ಹಣ ಪಡೆದಿದ್ದರ ಬಗ್ಗೆ ತಾಲೂಕಿನ ಎಲ್ಲ ಶಿಕ್ಷಕರು ಮಾತನಾಡುತ್ತಿದ್ದರು ಎಂದರೆ ಸರಿ. ನಾನು ಮತ್ತು ಇತರೆ ಶಿಕ್ಷಕರು ಸೇರಿ ಚಾಸಾ-1 ರವರಿಗೆ ತಿಳಿಸಿದ್ದೇವೆ. ಚಾಸಾ-1 ಇವರು ಚಾಸಾ-4 ಇವರಿಗೆ ದಾಖಲಾತಿಗಳನ್ನು ಪರಿಶೀಲನೆ ಮಾಡಲು ತಿಳಿಸಿದ್ದರು ಎಂದರೆ ಸರಿ. ಆಗ ಆರೋಪಿತನ ದಾಖಲಾತಿಗಳನ್ನು ಪರಿಶೀಲಿಸಿದಾಗ, ಆರೋಪಿ ಯಾವುದೇ ಶಿಕ್ಷಕರ ಅರ್ಜಿಯನ್ನು ಪಡೆಯದೇ ಶಿಕ್ಷಕರ ಗಳಿಕೆ ರಜೆಯ 2ನೇ ಬಿಲ್ಲನ್ನು ಮತ್ತು ಬಾಕಿ ಬಿಲ್ಲನ್ನು ತಯಾರಿಸಿ ಹೆಚ್.ಆರ್.ಎಮ್.ಎಸ್. ನಲ್ಲಿ ನೊಂದಣಿ ಮಾಡಿ ಓ.ಜಿ. ಬಳಸಿ ಹಾಗೂ ಸರಕಾರಿ ಟೋಕನ್‌ನ್ನು ಬಳಸಿ ಚಾಸಾ-4 ರವರ ಗಮನಕ್ಕೆ ತರದೇ, ಸಹಿಯನ್ನು ಪಡೆಯದೇ ಅನುದಾನ ಪುಸ್ತಕದಲ್ಲಿ ಪೂರ್ಣ ಬಿಲ್ಲನ್ನು ಸೃಷ್ಟಿ ಮಾಡಿ ಉಪಖಜಾನೆಗೆ ದಿನಾಂಕ 28.12.2017 ರಂದು ಮತ್ತು ದಿನಾಂಕ 15.09.2017 ರಂದು ಕೊಟ್ಟು ಚೆಕ್‌ನ್ನು ಪಡೆದು ನನ್ನ ಖಾತೆಗೆ ರೂ.25,000-00 ಹಾಕಿದ್ದರು ಎಂದರೆ ಸರಿ. ಅದೇ ರೀತಿ ಉಳಿದವರ ಖಾತೆಗೆ

ಹಾಕಿದ್ದರು ಎಂದರೆ ಸರಿ. ದಿನಾಂಕ 03.03.2018 ರಂದು ನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಆರೋಪಿ ಸೃಷ್ಟಿ ಮಾಡಿದ ದಾಖಲಾತಿಗಳನ್ನು ಚಾಸಾ-1 ರವರು ಪರಿಶೀಲಿಸಿದಾಗ ಅವರು ತಮ್ಮ ಸಹಿ ಇರಬಹುದು ಯಾವುದೋ ಕೆಲಸದ ಒತ್ತಡದಲ್ಲಿ ಇದ್ದಾಗ ಆರೋಪಿ ಸಹಿ ತೆಗೆದುಕೊಂಡು ಖಜಾನೆಗೆ ಸಲ್ಲಿಸಿ ಸರಕಾರಿ ಹಣ ದುರುಪಯೋಗ ಮಾಡಿ ವಂಚನೆ ಮಾಡಿದ್ದಾರೆ ಎಂದು ನನಗೆ ಗೊತ್ತಾಯಿತು ಎಂದರೆ ಸರಿ. ಎಲ್ಲ ವಿಷಯಗಳು ಗೊತ್ತಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಮುಖ್ಯ ವಿಚಾರಣೆಯಲ್ಲಿ ನಾನು ಸಾಕ್ಷಿ ಹೇಳಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ.ಆರ್.ಹೆಚ್.ಕೆ. ವಕೀಲರಿಂದಃ-**

ನನ್ನ ಖಾತೆಗೆ ಹಣ ಜಮಾ ಆಗಿದ್ದು ಎಲ್ಲಿಂದ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ಹಣ ಜಮೆ ಆಗಿದ್ದು ಪ್ರತಿ ತಿಂಗಳು ಗೊತ್ತಾಗುತ್ತದೆ ಎಂದರೆ ಸರಿ. ಹಣ ಯಾವ ಮಾದರಿಯಲ್ಲಿ ಬಂದಿತ್ತು ಎಂದು ನಾನು ಪರಿಶೀಲನೆ ಮಾಡಿಲ್ಲ. ನಾನು ಗಳಿಕೆ ರಜೆಯ ನಗದೀಕರಣಕ್ಕಾಗಿ ನಾನು ಅರ್ಜಿ ಸಲ್ಲಿಸಿದ್ದು ಆ ಪ್ರಕಾರ ಹಣ ಜಮೆ ಆಗಿದೆ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಆತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಸಾಕ್ಷಿಯ ಸಹಿ ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

| | |
|---|---|
| **<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.</u>** | |
| **ಸಿ.ಸಿ. ನಂ.1/2021** | |
| **ಚಾಸಾ - 16** | |
| **ಪ್ರಾಸಾ - 13** | |
| ಸಾಕ್ಷಿದಾರರ ಹೆಸರು | ವಿಜಯಕುಮಾರ ವಂದಾಲ |
| ತಂದೆ/ಗಂಡ/ತಾಯಿ ಹೆಸರು | ಬಸಪ್ಪ |
| ವಯಸ್ಸು | **43** ವರ್ಷ |
| ಉದ್ಯೋಗ | ಮುಖ್ಯ ಶಿಕ್ಷಕ, ಸರಕಾರಿ ಪ್ರೌಢ ಶಾಲೆ ಕುಂಚನೂರ. |
| ವಾಸಸ್ಥಳ | ಕುಂಚನೂರ, ತಾ.ಜಮಖಂಡಿ. |

<u>ಸಾಕ್ಷಿಯನ್ನು ದಿನಾಂಕಃ**-22.11.2023** ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-</u>

ನಾನು ದಿನಾಂಕ 27.06.2018 ರಿಂದ 30.06.2018 ರವರೆಗೆ ಪ್ರಭಾರ ಕ್ಷೇತ್ರ ಶಿಕ್ಷಣಾಧಿಕಾರಿ, ಜಮಖಂಡಿ ಎಂದು ಕರ್ತವ್ಯ ನಿರ್ವಹಿಸಿದ್ದೇನೆ. ದಿನಾಂಕ 29.06.2018 ರಂದು ನಮ್ಮ ಕಚೇರಿಗೆ ಪಿ.ಎಸ್.ಐ ಜಮಖಂಡಿ ನಗರ ಠಾಣೆ ಇವರಿಂದ ಆರೋಪಿಗೆ ಸಂಬಂಧಪಟ್ಟಂತೆ ಕೆಲವು ಮಾಹಿತಿಗಳನ್ನು ಕೇಳಿದ್ದರ ಮೇರೆಗೆ, 1) ಆರೋಪಿಗೆ ಸಂಬಂಧಪಟ್ಟ ಕಾರ್ಯದ ಮಾಹಿತಿ, 2)ಆರೋಪಿಯ ನೇಮಕಾತಿಯ ಆದೇಶದ ಪ್ರತಿ, 3) ಸೇವಾ ಪುಸ್ತಕದ ಮೊದಲನೇ ಪುಟ, 4) ಆರೋಪಿಯ ಕೈಬರಹದ ನಕಲು ಪ್ರತಿಗಳು, 5) ಡಿಸೆಂಬರ್-2017 ಮತ್ತು ಜನವರಿ-2018 ಆರೋಪಿ ಸಹಿ ಮಾಡಿದಂತಹ ಸಿಬ್ಬಂದಿಯವರ ಹಾಜರಾತಿ ಪುಸ್ತಕದ ನಕಲು, 6) ಬಿ.ಇ.ಓ ಕಚೇರಿಗೆ ಸಂಬಂಧಪಟ್ಟಂತಹ ಪಾಸಪುಸ್ತಕದ ನಕಲನ್ನು ಪಿ.ಎಸ್.ಐ ರವರಿಗೆ ಕೊಟ್ಟಿದ್ದೇನೆ. ಆರೋಪಿ ಕಚೇರಿ ಕೆಲಸದ ವಿವರದ ಪತ್ರವನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, ಆರೋಪಿಯ ನೇಮಕಾತಿ ಆದೇಶದ ಧೃಢೀಕೃತ ನಕಲನ್ನು ನಿಪಿ-5 ಎಂದು, ಸೇವಾ ವಿವರ ಪುಸ್ತಕದ ಒಂದು ಪುಟದ ಧೃಢೀಕೃತ ನಕಲನ್ನು ನಿಪಿ-6 ಎಂದು, ಹಾಜರಾತಿ ಪುಸ್ತಕದ 2 ಪುಟಗಳ ಧೃಢೀಕೃತ ನಕಲನ್ನು ನಿಪಿ-7 ಎಂದು, ಆರೋಪಿತನ ಕೈಬರಹದ ಮೂರು ಪುಟಗಳ ಧೃಢೀಕೃತ ನಕಲನ್ನು ನಿಪಿ-8 ಎಂದು, ಪಾಸ ಪುಸ್ತಕದ ಮೂರು ಪುಟಗಳ ಧೃಢೀಕೃತ ನಕಲನ್ನು ನಿಪಿ-9 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ-</u> ಆರೋಪಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**<u>ಮರುವಿಚಾರಣೆ ಇಲ್ಲ.</u>**
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಸಾಕ್ಷಿಯ ಸಹಿ ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.